**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

<u>ಸಿ.ಸಿ.ನಂ. **808 /2023**</u>

ದಿನಾಂಕಃ **20.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಶೇಖರಪ್ಪ | ಚಾಸಾ-1, ಪ್ರಾಸ.-4 |
| ತಂದೆಯ ಹೆಸರುಃ | ಸಣ್ಣಲಿಂಗಪ್ಪ | |
| ವಯಸ್ಸು ಃ | 60 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಹಿರೇಗರ್ಜೆ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ ವ್ಯಕ್ತಿ ನನ್ನ ಮಗ. ಅವರು ಬೆಂಗಳೂರಿನ ಮೆಟ್ರೋ ಕಂಪನಿಯಲ್ಲಿ ಸುಮಾರು 6 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಸುಮಾರು 3 ವರ್ಷದ ಹಿಂದೆ ನನ್ನ ಮಗ ರಜಾ ನಿಮಿತ್ತ ಭಾನುವಾರ ಮನೆಗೆ ಬಂದಿದ್ದು ಆತನಿಗೆ ಸೇರಿದ ಹೊಂಡಾ ಶೈನ್ ವಾಹನವನ್ನು ಸರ್ವಿಸ್ ಮಾಡಿಸಲು ಕಡೂರಿಗೆ ನಮ್ಮ ಮನೆಯಿಂದ ಕಡೂರಿಗೆ ಹೊರಟಿರುತ್ತಾನೆ. ಚಾಸಾ-2 ರವರು ಮಧ್ಯಾಹ್ನ 1.45 ಗಂಟೆಗೆ ನನ್ನ ಮಗನಿಗೆ ಕಾಮನಕೆರೆ ಬಳಿ ಅಪಘಾತವಾದ ವಿಚಾರವನ್ನು ದೂರವಾಣಿ ಮೂಲಕ ತಿಳಿಸಿ ಕಡೂರು ಆಸ್ಪತ್ರೆಗೆ ಬನ್ನಿ ಎಂದು ತಿಳಿಸಿರುತ್ತಾರೆ. ನಾನು ಮತ್ತು ಚಾಸಾ-11 ರವರು ತಕ್ಷಣ ಕಡೂರು ಆಸ್ಪತ್ರೆಗೆ ಬಂದು ನೋಡಿದಾಗ ನನ್ನ ಮಗನಿಗೆ ಅಪಘಾತವಾಗಿ ತಲೆಗೆ ಪೆಟ್ಟು ಬಿದ್ದು ಮೂಗು ಬಾಯಿಯಿಂದ ರಕ್ತ ಬರುತ್ತಿತ್ತು. ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ನನ್ನ ಮಗ ಕಡೂರಿನಿಂದ ಹಿರೆನಲ್ಲೂರು ಕಡೆಗೆ ಹೋಗುತ್ತಿರುವಾಗ ಹಿರೆನಲ್ಲೂರು ಕಡೆಯಿಂದ ಬೈಕಿನಲ್ಲಿ ಬಂದು ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಯಿತು ಎಂದು ಚಾಸಾ-2 ನನಗೆ ತಿಳಿಸಿರುತ್ತಾರೆ. ನಂತರ ಆರೋಪಿಯ ಹೆಸರು ವಿಳಾಸ ಕೇಳಲಾಗಿ ಆತನ ಹೆಸರು ವಸಂತಕುಮಾರ್, ಗಡುಗನಹಳ್ಳಿ ಎಂದು ಚಾಸಾ-2 ರವರು ನನಗೆ ತಿಳಿಸಿರುತ್ತಾರೆ. ಈ ಪ್ರಕರಣದ ಸಂಬಂಧ ಅಪಘಾತದ ದಿನ ಬೀರೂರು ಠಾಣೆಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಘಟನೆಗೆ ಸಂಬಂಧಿಸಿದಂತೆ ಮರುದಿನ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ಮತ್ತು 4 ರವರ ಸಮಕ್ಷಮ ಸಂಜೆ 6.00 ಗಂಟೆ ಸಮಯಕ್ಕೆ ನಿಪಿ-3 ರಂತೆ ಮಹಜರ್ ಜರುಗಿಸಿ ನಿಪಿ-4 ರಂತೆ ಛಾಯಾಚಿತ್ರ ತೆಗೆಸಿರುತ್ತಾರೆ. ಸಾಕ್ಷಿ ನಿಪಿ-3 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-4 ರ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅಲ್ಲಿಂದ ಬೀರೂರು ಠಾಣೆಗೆ ಕರೆದುಕೊಂಡು ಹೋಗಿ ಅಪಘಾತಕ್ಕೊಳಗಾದ ವಾಹನಗಳನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-6 ರಂತೆ ಸಂಜೆ 7.00 ರಿಂದ 8.00 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ನಿಪಿ-7 ಮತ್ತು 8 ರ ಛಾಯಾಚಿತ್ರ ತೆಗೆಸಿರುತ್ತಾರೆ. ಸಾಕ್ಷಿ ನಿಪಿ-6 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ

ನಿಪಿ-7 ಮತ್ತು 8 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತವು ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಸಅ**.** ರವರಿಂದ ಃ</u>

ದಿಃ 24.10.2022 ರಂದು ನನ್ನ ಮಗ ಕೆಎ-66 ಎಲ್-0895 ವಾಹನವನ್ನು ಸರ್ವಿಸ್ ಮಾಡಿಸಲು ಬೆಳಿಗ್ಗೆ 10.00 ಗಂಟೆಗೆ ತೆಗೆದುಕೊಂಡು ಹೋಗಿರುತ್ತಾನೆ ಎಂದರೆ ಸರಿ. ಮಧ್ಯಾಹ್ನ 2.30 ಗಂಟೆ ಸಮಯಕ್ಕೆ ಚಾಸಾ-2 ರವರು ಅಪಘಾತವಾದ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿ ಚಲಾಯಿಸುತ್ತಿದ್ದ ವಾಹನ ಸಂಖ್ಯೆ ಕೆಎ-66 ಜೆ-3496 ಎಂದರೆ ಸರಿ. ಮಧ್ಯಾಹ್ನ 1.45 ರ ಸಮಯದಲ್ಲಿ ಕಾಮನಕೆರೆಯ ಶುದ್ದ ಗಂಗಾ ಘಟಕದ ಎದುರಿನ ರಸ್ತೆಯಲ್ಲಿ ಆರೋಪಿಯು ಅತೀವೇಗ ಮತ್ತು ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿಕೊಂಡು ಬಂದು ನನ್ನ ಮಗ ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ದಾರಿ ಮಧ್ಯೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾನು ತೋರಿಸಿದ ಸ್ಥಳದಲ್ಲಿ ದಿಃ 25.10.2022 ರಂದು ಸಂಜೆ 5.00 ರಿಂದ 6.00 ಗಂಟೆವರೆಗೆ ನಿಪಿ-3 ರಂತೆ ಸ್ಥಳ ಮಹಜರ್ ಜರುಗಿಸಿರುತ್ತಾರೆ ಎಂದರೆ ಸರಿ. ಅದೇ ದಿನ ನಾನು ತೋರಿಸಿದ ವಾಹನಗಳಾದ ಕೆಎ-66 ಎಲ್-0895 ಮತ್ತು ಕೆಎ-66 ಜೆ-3496 ಗಳನ್ನು ಬೀರೂರು ಠಾಣಾ ಆವರಣದಲ್ಲಿ ನಿಪಿ-6 ರಂತೆ ಸಂಜೆ 6.30 ರಿಂದ 7.30 ರವರೆಗೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

<u>ಪಾಟೀಸವಾಲುಃ ಶ್ರೀ ಡಿ ಕೆ ಕೆ**.** ಆರೋಪಿ ಪರ ವಕೀಲರಿಂದಃ</u>

ನಿಪಿ-9 ರ ದೂರನ್ನು ಚಾಸಾ-4 ರವರು ಬರೆದಿರುತ್ತಾರೆ. ನಿಪಿ-9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಬರೆದಿರುವ ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಹಿರೆನಲ್ಲೂರು ಕಡೆಯಿಂದ ಅಪಘಾತವಾದ ಸ್ಥಳ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿ ಅಪಘಾತವಾದ ಸ್ಥಳದ ಎಡಭಾಗಕ್ಕೆ ಶುದ್ದ ಗಂಗಾ ನೀರಿನ ಘಟಕ ಇದೆ ಎಂದು ನುಡಿಯುತ್ತಾರೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನೂ ಸಹ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ ಎಂದು ಪ್ರತ್ಯಕ್ಷ ದರ್ಶಿಗಳ ತಿಳಿಸಿರುತ್ತಾರೆ ಎಂದರೆ ಸರಿ. ನೀರಿನ ಘಟಕಮ ಹಿರೆನಲ್ಲೂರಿನಿಂದ ಬರುವಾಗ ಎಡ ಭಾಗಕ್ಕೆ ಭಾಗಕ್ಕೆ ಇರುತ್ತದೆ ಎಂದರೆ ಸರಿ. ಆರೋಪಿಯು ರಸ್ತೆಯ ಎಡಭಾಗದಲ್ಲಿ ವಾಹನ ಚಾಲನೆ ಮಾಡುತ್ತಿದ್ದ ಎಂದರೆ ಸರಿ. ಘಟನಾ ಸ್ಥಳವನ್ನು ನನಗೆ ಚಾಸಾ-2 ರವರು ತೋರಿಸಿರುತ್ತಾರೆ. ದೇವರಾಜ್ ರವರು ಸ್ಥಳ ತೋರಿಸಿದ ಬಗ್ಗೆ ನನಗೆ ತಿಳಿಯಿತೇ ಹೊರತು ಅಪಘಾತದ ಬಗ್ಗೆ ಖುದ್ದು ಮಾಹಿತಿ

ಇಲ್ಲಾ ಎಂದರೆ ಸರಿ. ಸ್ಥಳ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ವಾಹನವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಮಾನತ್ ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವು ಮೃತ ವ್ಯಕ್ತಿಯ ಅಜಾಗರೂಕತೆಯಿಂದ ಆಗಿರುತ್ತದೆಯೇ ಹೊರತು ಆರೋಪಿಯ ತಪ್ಪಿನಿಂದಲ್ಲ ಎಂದರೆ ಸರಿಯಲ್ಲ. ಅಪಘಾತ ವಿಮಾ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ವಿಮಾ ಪರಿಹಾರ ಕೋರಿ ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಅಪಘಾತವು ನನ್ನ ಮಗನ ತಪ್ಪಿನಿಂದಲೇ ಆಗಿರುತ್ತದೆ ಎಂದು ಪ್ರತ್ಯಕ್ಷ ದರ್ಶಿಗಳು ಹೇಳಿದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಹೆಲ್ಮೇಟ್ ಧರಿಸಿರಲಿಲ್ಲ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.